


'ಮೂಗಿರುವ ತನಕ ನೆಗಡಿ ತಪ್ಪಿದ್ದಲ್ಲ' ಅನ್ನೋ ಹಾಗೆ ನಾವು ಊರಲ್ಲಿ ಇರುವ ತನಕ ನಮ್ಮನ್ನು ಬಿಟ್ಟು ಈ ಸೊಳ್ಳೆ ಇರಲಾರವು ಅನ್ನಿಸಿತು. ನಮ್ಮ ಮನೆಯಲ್ಲಿನ ಸೊಳ್ಳೆಗಳ ಸರ್ವನಾಶಕ್ಕೆ ನಾನು ಹಮ್ಮಿಕೊಂಡ 'ಆಪರೇಶನ್ ಮಸ್ಕಿಟೋ' ಯೋಜನೆ ಯಶಸ್ವಿಯಾಗಲಿಲ್ಲ. ಸೊಳ್ಳೆಬ್ಯಾಟ್ ಹಿಡಿದು ಮನೆತುಂಬ ಓಡಾಡಿ ಬ್ಯಾಟ್ ಬೀಸುತ್ತಿದ್ದಂತೆಯೇ ಸಿಕ್ಕವೆಲ್ಲ ಕ್ಲೀನ್‌ಬೋಲ್ಡ್ ಏನೋ ಆಗುತ್ತಿದ್ದವು. ನಮ್ಮ ಮನೇಲಿರುವವು ನಾಶವಾಗುತ್ತಿದ್ದವು ನಿಜ, ಮತ್ತೆ ಐದ್ಹತ್ತು ನಿಮಿಷ ಕಳೆಯುವುದರೊಳಗಾಗಿ ಪಕ್ಕದ ಮನೆಯವು, ಎದುರು ಮನೆಯವು, ಹಾದಿಬೀದಿಯವು ಬಂದು ಸೇರಿಕೊಂಡುಬಿಡುತ್ತಿದ್ದವು. ಇವುಗಳ ಸಂಪೂರ್ಣ ನಿರ್ಮೂಲನೆ ಸಾಧ್ಯವಿಲ್ಲವೆಂದು ತಿಳಿದು ಸುಮ್ಮನೆ ಬಿಡುವ ಹಾಗೂ ಇಲ್ಲ. ಜೀಕಾ ವೈರಸ್, ಹಳದಿ ಜ್ವರ, ಕಾಮಾಲೆ, ಆನೆಕಾಲು ರೋಗ ಮುಂತಾದ ಭಯಾನಕ ರೋಗಗಳ ವೈರಸ್‌ಗಳ ಹರಡುವಿಕೆಗೆ ಸೊಳ್ಳೆಗಳೇ ಕಾರಣವಾದ್ದರಿಂದ ನಮ್ಮ ಎಚ್ಚರದಲ್ಲಿ ನಾವಿರಲೇಬೇಕೆನಿಸಿತು.

ಈ ಸೊಳ್ಳೆ ಪುರಾಣವನ್ನೊಮ್ಮೆ ಜಾಲಾಡಬೇಕೆಂದು ಅಂತರ್ಜಾಲಕ್ಕೆ ಲಗ್ಗೆ ಇಟ್ಟೆ. ಸಿಕ್ಕಿದ್ದು ಎಂಥಾ ವಿಷಯ ಅಂತೀರಿ... ಭಲೇ ಆಶ್ಚರ್ಯ! ಸೊಳ್ಳೆಗಳ ಹೆಸರಿನಲ್ಲಿಯೇ ಒಂದು ದಿನಾಚರಣೆ ಇದೆ! ಇವತ್ತು ಯಾರು ಯಾರದೋ ಹೆಸರಿನಲ್ಲಿ ದಿನಾಚರಣೆ ಮಾಡುತ್ತಿರುವಾಗ ನಮ್ಮ ಜೀವನದಲ್ಲಿ ಹಾಸುಹೊಕ್ಕಾಗಿರುವ ಸೊಳ್ಳೆಯ ದಿನಾಚರಣೆ ಇರಬಾರದೇ? ಹಾಗಂತ ಅದು ಸೊಳ್ಳೆ ಹುಟ್ಟಿದ ದಿನವಲ್ಲ! ಸೊಳ್ಳೆಯೇ ಮಲೇರಿಯಾ ರೋಗಕ್ಕೆ ಮೂಲ ಕಾರಣ ಎಂದು ಗೊತ್ತಾದ ದಿನ. ಇದಕ್ಕೂ ಮೊದಲು ಸೊಳ್ಳೆ ಒಂದು ನಿಷ್ಕಪಟ ಕೀಟ. ಉಫ್... ಅಂತ ಊದಿದರೆ ಹಾರಿಹೋಗುವ ನಿರುಪದ್ರವಿ ಜೀವಿ ಎಂದೇ ಬಗೆದಿದ್ದರಂತೆ. ಸ್ಕಾಟ್‌ಲ್ಯಾಂಡಿನ ವೈದ್ಯ ಸರ್ ಪ್ಯಾಟ್ರಿಕ್ ಮಾನ್ಸನ್ ಮಲೇರಿಯಾ ಹರಡುವುದಕ್ಕೆ ಕಾರಣ ಸೊಳ್ಳೆ ಎಂದು ಶೋಧಿಸಿದನು. ಆ ಶೋಧನೆಯ ನಂತರ ಅವನು 'ಮಸ್ಕಿಟೋ ಮಾನ್ಸನ್' ಎಂದು ಹೆಸರಾದನಂತೆ. ಅದಾದ ನಂತರದಲ್ಲಿ ಭಾರತೀಯ ಮೆಡಿಕಲ್ ಸರ್ವೀಸ್‌ನಲ್ಲಿ ವೈದ್ಯನಾಗಿದ್ದ ಸರ್ ರೊನಾಲ್ಡ್ ರಾಸ್ 'ಸೊಳ್ಳೆಗಳು ಮತ್ತು ಮಲೇರಿಯಾ ಸಂಬಂಧ'ವನ್ನು ನಿರ್ದಿಷ್ಟಪಡಿಸಿದನು. ಆ ದಿನವೇ 1897, ಆಗಸ್ಟ್ 29. ಅಂದಿನಿಂದ ಆ ದಿನವನ್ನು 'ಸೊಳ್ಳೆ ದಿನ'ವೆಂದು ಕರೆಯಲಾಗುತ್ತದೆ.

ಇನ್ನೂ ಕೇಳಿ, ಸೊಳ್ಳೆಯ ಒಳ್ಳೆಯದಲ್ಲದ ಮಜಕೂರ. ಈ ಸೊಳ್ಳೆಯಲ್ಲಿ 2500 ಪ್ರಭೇದಗಳಿವೆಯಂತೆ. ಇವುಗಳಲ್ಲಿ 400 'ಅನಾಫೆಲಿಸ್' ಕುಟುಂಬಕ್ಕೆ ಸೇರಿವೆ. ಇವು ಮಲೇರಿಯಾವನ್ನು ಹರಡುತ್ತವೆ. ಇನ್ನೊಂದು ಬಹುಮುಖ್ಯ ಅಂಶ ಇದೆ, ಇದನ್ನು ಕೇಳಿ ಸ್ತ್ರೀವಾದಿಗಳು ಯಾರೂ ದಯಮಾಡಿ ಬೇಜಾರಾಗಬಾರದು ಮತ್ತೆ! ಈ ಸೊಳ್ಳೆಗಳಲ್ಲಿ ಹೆಣ್ಣು ಸೊಳ್ಳೆಗಳು ಅತ್ಯಂತ ಕ್ರೂರಿ, ರಕ್ತ ಪಿಪಾಸುಗಳು. ನೂರಕ್ಕೂ ಹೆಚ್ಚು ರೋಗಗಳು ಈ ಹೆಣ್ಣು ಸೊಳ್ಳೆ ಕಚ್ಚುವುದರಿಂದಲೇ ಬರುತ್ತವಂತೆ. ಪಾಪ, ಗಂಡು ಸೊಳ್ಳೆಗಳು ಹೆಣ್ಣುಸೊಳ್ಳೆಯಷ್ಟು ಕ್ರೂರಿಯಲ್ಲ. ಸಸ್ಯಗಳ ಎಲೆ, ಹೂವಿನ ಮಕರಂದ ತಿಂದು ಬದುಕುತ್ತವೆ. ಜಗತ್ತಿನಲ್ಲಿ ಯಾವ ಕ್ರೂರ ಪ್ರಾಣಿಗಳೂ ಕೊಲ್ಲದಷ್ಟು ಸಂಖ್ಯೆಯಲ್ಲಿ ಮನುಷ್ಯನನ್ನು ಸೊಳ್ಳೆಗಳು ಕೊಲ್ಲುತ್ತವೆ ಎಂದರೆ ನಂಬಲೇಬೇಕು.

ಪ್ರತಿವರ್ಷ ಸರಾಸರಿ ಸುಮಾರು 7 ಲಕ್ಷ ಜನರನ್ನು ಸೊಳ್ಳೆಗಳು ಕೊಲ್ಲುತ್ತವೆ. ಪ್ರಾಣಿಗಳ ರಕ್ತಕ್ಕಿಂತ ಮನುಷ್ಯ ರಕ್ತವೇ ಸೊಳ್ಳೆಗೆ ಹೆಚ್ಚು ಇಷ್ಟವಂತೆ. ಹೆಣ್ಣುಸೊಳ್ಳೆ ಮೊಟ್ಟೆ ಇಡುವ ಪೂರ್ವದಲ್ಲಿ ಪೌಷ್ಟಿಕಾಂಶವನ್ನು ಪಡೆಯಲು ಯಥೇಚ್ಛ ರಕ್ತಭೋಜನ ಮಾಡುತ್ತದೆಯಂತೆ.

ಸೊಳ್ಳೆ ನಿಯಂತ್ರಣಕ್ಕೆ ನಾವು ಮನೆಮಂದಿಯಷ್ಟೇ ಅಲ್ಲ, ನಮ್ಮ ಆರೋಗ್ಯ ಇಲಾಖೆಯೂ ಕಟಿಬದ್ಧವಾಗಿ ನಿಂತಿದೆ. ಕಳೆದ ಬಾರಿ ಡೆಂಗ್ಯೂ ಜ್ವರ ಹೆಚ್ಚಾಗಿ ಕಾಣಿಸಿಕೊಂಡಾಗ ಸೊಳ್ಳೆಗಳನ್ನು ಮಟ್ಟಹಾಕಲೇಬೇಕೆಂದು ಆರೋಗ್ಯ ಇಲಾಖೆ ಆಶಾ ಕಾರ್ಯಕರ್ತೆಯರನ್ನು ಸನ್ನದ್ಧಗೊಳಿಸಿತ್ತು. ಸೊಳ್ಳೆಯ ಆವಾಸ ತಾಣ, ಅಡಗುತಾಣ, ಅಭಿವೃದ್ಧಿ ತಾಣ ಎಲ್ಲವೂ ನಿಂತನೀರು, ಮಲಿತ ನೀರು ಇತ್ಯಾದಿಗಳಾಗಿವೆ. ಮನೆಯಲ್ಲಿ ಬಿಸಾಕಿದ ಟೈರು, ವೇಸ್ಟ್ ಡಬ್ಬಿ, ತೆಂಗಿನ ಚಿಪ್ಪು ಇಂತವುಗಳಲ್ಲಿ ನೀರು ನಿಂತರೆ ಸೊಳ್ಳೆಯ ಸಂತಾನಭಿವೃದ್ಧಿಗೆ ನಾವೇ ಹೊರಸು ಹಾಕಿಕೊಟ್ಟಂತಾಗುತ್ತದೆ! ಮನೆಯ ನೀರಿನ ಟ್ಯಾಂಕು, ಬ್ಯಾರಲ್, ತೊಟ್ಟಿ ಯಾವುದರಲ್ಲಿಯೂ ಎರಡು ದಿನಕ್ಕಿಂತ ಹೆಚ್ಚಿನ ನೀರು ಸಂಗ್ರಹ ಇದ್ದಲ್ಲಿ ಸೊಳ್ಳೆ ಅಲ್ಲಿ ಮೊಟ್ಟೆ ಹಾಕಲು ಪ್ರಶಸ್ತ ಜಾಗಗಳಾಗಿವೆ. ನೀವಿದನ್ನು ಜನರಿಗೆ ಮನವರಿಕೆ ಮಾಡಬೇಕು ಎಂದು ಆಶಾ ಕಾರ್ಯಕರ್ತೆಯರಿಗೆ ಹೇಳಿದ್ದೇ ತಡ ಅವರು ಫೀಲ್ಡಿಗೆ ಇಳಿದೇ ಬಿಟ್ಟರು. ತಮಗೆ ಕೊಟ್ಟ ಏರಿಯಾದ ಮನೆಗಳಿಗೆ ಎರಡು ದಿನಕ್ಕೊಮ್ಮೆ ಭೇಟಿ ನೀಡಿ, ನೀರಿನ ಹಂಡೆ, ಭಾಂಡೆ, ಗಡಿಗೆ, ಕೊಡ, ಬಕೇಟು ಇತ್ಯಾದಿಗಳನ್ನು ತೆರೆತೆರೆದು ನೋಡಿ, ಸೊಳ್ಳೆ ಮೊಟ್ಟೆಗಳನ್ನು ಇಟ್ಟಿದೆಯೇನು, ಲಾರ್ವಾಗಳು ಇವೆಯೇನು ಅಂತ ಪರೀಕ್ಷೆ ಮಾಡತೊಗಿದರು. ಅಲ್ಲಿ ಸೊಳ್ಳೆಯ ಮರಿಗಳೇನಾದರೂ ಕಂಡುಬಂದರೆ ನೀರನ್ನು ರೋಡಿಗೆ ಚೆಲ್ಲಿಸಿ ಬಿಡುತ್ತಿದ್ದರು.

ನಮ್ಮ ಏರಿಯಾದ ಕಾರ್ಯಕರ್ತೆ ಪ್ರಮೀಳಾ ಓಣಿಯಲ್ಲಿ ಕಾಣಿಸಿಕೊಳ್ಳುತ್ತಿದ್ದಂತೆ ಕೆಲವರು ಬಾಗಿಲು ಹಾಕಿ ದೂರ ಹೋಗಿಬಿಡುತ್ತಿದ್ದರು. ಇನ್ನು ಕೆಲವರು 'ಏ ಯವ್ವಾ, ಹುಳಾ ಇದ್ದರ ನಮ್ಮ ಮನಿಯಾಗ ಇರತಾವು ಹೋಗು. ನೀಯೇನು ಹಚ್ಚಿದೀ... ಮೊದ್ಲ ಆ ಪಂಚಾಯ್ತಿಯವರಿಗೆ ಹೇಳು ದಿನಾ ನೀರು ಬಿಡಾಕ. ನಾಲ್ಕ ದಿನಕ್ಕೊಮ್ಮೆ ನೀರು ಬಿಡ್ತಾರ. ಇದ್ದ ನೀರ ನೀ ಚೆಲ್ಲಿ ಹೋದರ ಎಲ್ಲಿಂದ ತರಬೇಕು ನಾವು ನೀರು?' ಅಂತ ಆವಾಜ್ ಮಾಡತೊಡಗಿದರು. ಪ್ರಮೀಳಾ 'ಯವ್ವಾ, ನಿಮ್ಮ ಒಳ್ಳೇದಕ್ಕ ನಾನು ಹೇಳೋದು' ಅಂದರೆ, 'ಹೇಳಿ ಅಷ್ಟೇ ಹೋಗಿಬಿಡು. ನೀರು ಚೆಲ್ಲಬ್ಯಾಡ. ನೀ ನೀರು ಚೆಲ್ಲುವಂಗಿದ್ರ... ನಾಲ್ಕ ಕೊಡ ನೀರು ಚೆಲ್ಲಿ, ಎಂಟು ಕೊಡ ನೀನಾ ತಂದು ಹಾಕಿ ಹೋಗಬೇಕ ನೋಡು' ಅಂದಿದ್ದಕ್ಕೆ ಪ್ರಮೀಳಾ ಪೆಚ್ಚಾಗಿ ಹೋಗಿಬಿಟ್ಟಳು.

ಡೆಂಗ್ಯೂ, ಮಲೇರಿಯಾ ಬರುವುದಕ್ಕೂ ಮೊದಲೇ ಪ್ರತಿರಾತ್ರಿ ನಿದ್ರೆ ಬರುವುದನ್ನು ತಡೆಯುತ್ತವಲ್ಲ, ಅದಕ್ಕೇನು ಮಾಡುವುದು? ಮೇಲೆ ಹೇಳಿದ ಸಾಧನಗಳಿಂದಂತಲೂ ಸೊಳ್ಳೆಯನ್ನು ಬಗ್ಗು ಬಡಿಯುವುದು ಸಾಧ್ಯವಾಗಲಿಲ್ಲ. ಬೇರೆ ವಸ್ತುವನ್ನು ನಂಬುವ ಬದಲು, ನಮ್ಮ ಮೇಲೆ ನಾವೇ ಹೆಚ್ಚಿನ ನಂಬಿಕೆ ತಾಳಿ, ಕಿವಿಯನ್ನು ಚುರುಕುಗೊಳಿಸಿ ಶಬ್ದವೇಧಿ ವಿದ್ಯೆಯಲ್ಲಿ ನಾವೆಲ್ಲರೂ ಪಳಗಬೇಕಾದ ಅಗತ್ಯವಿದೆ. ಈ ಸೊಳ್ಳೆಗಳು ಎಷ್ಟು ಸೊಕ್ಕಿನ ಕ್ರಿಮಿಗಳೆಂದರೆ ತಮ್ಮ 'ಗೊಂಯ್...' ಅನ್ನುವ ಸೌಂಡನ್ನು ಕೇಳಿದರೆ ನಮಗೆ ಸಿಟ್ಟು ಉಕ್ಕಿ ಅವುಗಳನ್ನು ಹೊಸಕಿ ಹಾಕಿ ಬಿಡಬೇಕು ಅನ್ನಿಸುತ್ತದೆ! ಹೀಗಿದ್ದರೂ ನಮ್ಮನ್ನು ಇನ್ನಷ್ಟು ಕೆಣಕಲು ಕಿವಿಯ ಬಳಿಯೇ ಬಂದು ಗೊಂಯ್‌ಕಾರ ಹೊಮ್ಮಿಸಿ ತಾನಷ್ಟೇ ಅಲ್ಲದೇ ತನ್ನ ಸಂಗಾತಿ ಸೊಳ್ಳೆಯನ್ನು ಕರೆದು ಕಚ್ಚಲು ಅಣಿಯಾಗುತ್ತವೆಂದರೆ ಸೊಳ್ಳೆಯ ಧೈರ್ಯವನ್ನು ನೀವೇ ಊಹಿಸಿ.

ಹಗಲು ಹೊತ್ತಾದರೆ ಸರಿ, ಅದು ನಮ್ಮ ಮೇಲೆ ಆಕ್ರಮಣ ಮಾಡುವ ಜಾಗವನ್ನು ನೋಡಿ ನಮ್ಮ ಹಸ್ತಗಳಿಂದ ಹೊಡೆದು ಕೊಲ್ಲಬಹುದು. ರಾತ್ರಿ ಹೊತ್ತಿನಲ್ಲಿಯೇ ಈ ಶಬ್ದವೇಧಿ ಅವಶ್ಯಕವಾಗುತ್ತದೆ. ಹೇಗಿದ್ದರೂ ಸೊಳ್ಳೆ ಸುಮ್ಮನೆ ಬರುವುದಿಲ್ಲ. ತನ್ನ ಸಂಗೀತ ಕಛೇರಿಯೊಂದಿಗೆಯೇ ನಮ್ಮ ಬಳಿ ಬರುತ್ತದೆ. ಆಗ ನಾವು ಕೂಡಲೇ ಜಾಗ್ರತರಾಗಿ ಯಾವ ದಿಕ್ಕಿನಿಂದ ಸಂಗೀತ ಕೇಳಿ ಬರುತ್ತದೆ ಎಂಬುದನ್ನು ನಿಖರವಾಗಿ ಊಹಿಸಿ ಘಟೀರೆಂದು ಚಪ್ಪಾಳೆ ತಟ್ಟಿ ಬಿಡಬೇಕು! ಸೆಂಟಿಮೀಟರ್ ಅಲ್ಲ, ಮಿಲಿಮೀಟರ್‌ನ ಗಾತ್ರದ ಲೆಕ್ಕಕ್ಕೂ ಸಿಗದ ಒಂದು ಕೀಟ, ಅಡಿಗಳ ಲೆಕ್ಕದಲ್ಲಿ ಅಳೆಯುವ ಮನುಷ್ಯನನ್ನು ಈ ಪರಿ ಕಾಡುತ್ತದೆಂದರೆ ನಾವು ಸಹಿಸಿಕೊಂಡು ಸುಮ್ಮನಿರಬೇಕೇ..? ಖಂಡಿತ ಸಾಧ್ಯವಿಲ್ಲ. 8ರಿಂದ 10 ಸೆಂ.ಮೀ. ಗಾತ್ರವಿರುವ ನಮ್ಮ ಹಸ್ತಗಳಿಂದ ಚಪ್ಪಾಳೆ ತಟ್ಟಿದಾಗ ಸೊಳ್ಳೆ ಸಿಕ್ಕಿ ಸಾಯುವುದು ಶತಸಿದ್ಧ. ಶಬ್ದವೇಧಿ ವಿದ್ಯೆಯನ್ನು ಕರಗತಮಾಡಿಕೊಂಡು ಸೊಳ್ಳೆಯ ಕುಲವನ್ನು ಸಂಪೂರ್ಣ ನಿರ್ನಾಮ ಮಾಡುತ್ತೇವೆ ಎಂದೇನೂ ಅಲ್ಲ; ಕನಿಷ್ಠ ಪಕ್ಷ ಕಾಡುವ ಸೊಳ್ಳೆಯನ್ನು ಕೊಂದೆನಲ್ಲ ಎಂಬ ಸಮಾಧಾನದಿಂದ ನಿದ್ರೆ ಮಾಡುವುದಂತೂ ಗ್ಯಾರಂಟಿ.

ಪ್ರತಿಕ್ರಿಯಿಸಿ: feedback@sudha.co.in